# ಯುಗಾದಿ ಎಂದರೆ ಹೊಸ ಹುಟ್ಟು, ಹೊಸ ಚಿಗುರು

# ಯುಗಾದಿ ಎಂದರೆ ನವ್ಯ ಮತ್ತು ನವನವೀನ....!!

ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಲೇ ಇರುತ್ತದೆ.

ಬರುವಂಥ ಪ್ರತಿಯೊಂದು ಯುಗಾದಿಯನ್ನು ನಾವು ಸ್ವಾಗತಿಸಲೇಬೇಕು.

ಬದಲಾವಣೆ ಜಗದ ನಿಯಮ ಮಾತ್ರ ಅಲ್ಲ; ಅದು ಯುಗದ ನಿಯಮ ಕೂಡ ಅಹುದು. ಬದಲಾವಣೆಗೆ ನಮ್ಮನ್ನು ನಾವು ಒಡ್ಡಿಕೊಳ್ಳಲೇಬೇಕು ಮತ್ತು ಒಪ್ಪಿಸಿಕೊಳ್ಳಲೇಬೇಕು.

ಸ್ವತಃ ಯುಗಾದಿಯೇ ಹೇಳುತ್ತದೆ,

''ಋತು ಬದಲಾಗುತ್ತದೆ, ಋತುಚಕ್ರ ಬದಲಾಗುತ್ತದೆ, ಋತುಮಾನ ಬದಲಾಗುತ್ತದೆ. ಋತುವಿನ ಮಾನದಂಡ ಬದಲಾಗುತ್ತದೆ, ಪಕ್ಷ, ಮಾಸ, ಸಂವತ್ಸರಗಳು ಬದಲಾಗುತ್ತವೆ, ಇಡೀ ಪ್ರಕೃತಿ ಬದಲಾಗುತ್ತದೆ, ಪರಿಸರ ಬದಲಾಗುತ್ತದೆ, ಎಲ್ಲರೂ ಬದಲಾಗುತ್ತಾರೆ; ಎಲ್ಲವೂ ಬದಲಾಗುತ್ತದೆ. ನಾನೂ ಸಹ ಬದಲಾಗುತ್ತೇನೆ. ನೀವೂ ಬದಲಾಗಲೇಬೇಕು. ನಾವೆಲ್ಲ ಬದಲಾಗುವಾಗ ನೀನು ಮಾತ್ರ ಬದಲಾಗುವುದಿಲ್ಲವೆಂದರೆ ನಡೆಯುವುದಿಲ್ಲ'' ಎಂದು.

ಬದಲಾವಣೆ ಬದುಕಿನಲ್ಲಿ ಅನಿವಾರ್ಯ. ಪ್ರತಿಯೊಬ್ಬ ಮನುಷ್ಯನು ಬದಲಾಗುತ್ತ ಇರುತ್ತಾನೆ. ಆತ ಬದಲಾಗುತ್ತಿರುವುದು ಸ್ವತಃ ಆತನಿಗೇನೇ ಗೊತ್ತಾಗುವುದಿಲ್ಲ.

ಗೊತ್ತಾಗದಂತೆ ಮತ್ತು ಗೊತ್ತಿಲ್ಲದಂತೆ ಎಲ್ಲರೂ ಮತ್ತು ಎಲ್ಲವೂ ಬದಲಾಗುತ್ತಲಿರುತ್ತದೆ. ಕಾಲಚಕ್ರ ಎಲ್ಲರನ್ನೂ ಆವರಿಸಿಕೊಂಡು ''ಸ್ವಾಹಾ, ಸ್ವಧಾ'' ಎಂದುಕೊಂಡಿರುತ್ತದೆ. ಮನುಷ್ಯ ತನ್ನ ಶೈಶವದಿಂದ ಮೊದಲುಮಾಡಿಕೊಂಡು ಸಾಯುವವರೆಗೆ ಪ್ರತಿಕ್ಷಣವೂ ಬದಲಾಗುತ್ತಲೇ ಇರುತ್ತಾನೆ. ಮನುಷ್ಯನೀತ ಶೈಶವದಿಂದ ಕುಮಾರಾವಸ್ಥೆಗೆ, ಕೌಮಾರ್ಯದಿಂದ ತರುಣಾವಸ್ಥೆಗೆ, ತಾರುಣ್ಯದಿಂದ ಮಧ್ಯವಯಸ್ಸಿಗೆ, ಮಧ್ಯವಯಸ್ಸಿನಿಂದ ವೃದ್ಧಾಪ್ಯಕ್ಕೆ, ವೃದ್ಧಾಪ್ಯದಿಂದ ''ಆಗು ನೀ ಅನಿಕೇತನ'' ಹಂತಕ್ಕೆ ತನ್ನನ್ನು ತಾನು ಒಪ್ಪಿಸಿಕೊಂಡು ಬದಲಾಗುತ್ತಲೇ ಇರುತ್ತಾನೆ.

ಬದಲಾವಣೆ ಯಾವ ರೀತಿ ಅನಿವಾರ್ಯವೋ ಹಾಗೆಯೇ ಅದು ಅಂಗೀಕಾರ್ಯ ಕೂಡ ಅಹುದು. ಬದಲಾವಣೆಗೆ ನಾವು ಹೊಂದಿಕೊಳ್ಳಲೇಬೇಕು. ನಾವುಗಳು ಬರೀ ಪರ+ವರ್ತನೆಗೆ ಅಂದರೆ ಬೇರೆಯವರ ವರ್ತನೆ, ನಡತೆ, ನಡವಳಿಕೆಗಳಿಗೆ ಸಾಕ್ಷಿಯಾಗುವುದರ ಜೊತೆ ಜೊತೆಯಲ್ಲಿ ಪರಿವರ್ತನೆಗೆ ಕೂಡ ಸಾಕ್ಷಿಯಾಗುತ್ತಿರಬೇಕು.

ಪರಿವರ್ತನೆ ಮತ್ತು ಪರಾಮರ್ಶೆ ಬದುಕಿನ ಎರಡು ಮಗ್ಗಲುಗಳು.

ಶೂನ್ಯಸಿಂಹಾಸನಾಧೀಶ್ವರರಾದ ಅಲ್ಲಮಪ್ರಭುಗಳು ಕೂಡ ಬದಲಾವಣೆ ಅನಿವಾರ್ಯ. ಅದನ್ನು ಸ್ವಾಗತಿಸಬೇಕೆಂದು ಹೇಳಿದ್ದಾರೆ. ಅಲ್ಲಮಪ್ರಭುಗಳ ಈ ವಚನವನ್ನು ಗಮನಿಸಿ.

ಬದಲಾವಣೆ ಅನಿವಾರ್ಯ ಎಂಬುವುದು ಸ್ಪಷ್ಟವಾಗುತ್ತದೆ.

21ನೇ ಶತಮಾನ ಬಿಡಿ,

12ನೇ ಶತಮಾನದಲ್ಲಿಯೇ ಅಲ್ಲಮರು ಈ ಮಾತನ್ನು ಹೇಳಿದ್ದಾರೆಂದರೆ ಅವರ ದೂರದೃಷ್ಟಿ ಮತ್ತು ದಿವ್ಯದೃಷ್ಟಿಯನ್ನು ಅಭಿನಂದಿಸಲೇಬೇಕು. ಅವರು ಹೇಳುತ್ತಾರೆ,

''ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು
ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯ.

ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಯ್ದು
ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯ.
ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ
ಝಂಕಿಸಿ ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯ.
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ
ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯ.
ಗುಹೇಶ್ವರ, ನಿಮ್ಮ ಕಾಲದ ಕಟ್ಟಳೆಗೆ ಆನು ಬೆರಗಾದೆನು'' ಎಂದು.
ಇವತ್ತೆಲ್ಲ ನಾವು ಕಲಿಯುಗದಿಂದ ಕಂಪ್ಯೂಟರ್ ಯುಗದಲ್ಲಿ ಕಾಲಿಟ್ಟಿದ್ದೇವೆ.
ಇದು ಡಿಜಿಟಲ್ ಯುಗ. ಇದು ಸನ್ಯಾಸಿ ಯುಗವಲ್ಲ; ಸೈಬರ್ ಯುಗ.
ಇದು ಇಂಟರ್‌ನೆಟ್ ಯುಗ. ಇದು ಆನ್‌ಲೈನ್ ಯುಗ.
ಈ ಆನ್‌ಲೈನ್ ಯುಗದಲ್ಲಂತೂ,
ಶ್ರೀಗುರು ಶಿಷ್ಯನ ಸಮೀಪಕ್ಕೆ ಬರುವ ಹಾಗೆ ಇಲ್ಲವೇ ಇಲ್ಲ.
ಇನ್ನು ಶಿಷ್ಯನನ್ನು ಬಡಿಯುವ, ಬಯ್ಯುವ, ಝಂಕಿಸುವ ಮಾತಂತೂ ದೂರೇ ಉಳಿಯಿತು!

ಈಗ ಗುರು ಶಿಷ್ಯನ ಸಮೀಪಕ್ಕೆ ಬಾರದೆ ಅದೆಲ್ಲೋ ದೂರದಲ್ಲಿ ಕುಳಿತು ಪಾಠಮಾಡಿದರೆ ಆಗಲಿ ಮಹಾಪ್ರಸಾದ ಎನ್ನಲೇಬೇಕಾಗಿದೆ.

ಇದು ಕಾಲದ ಕಟ್ಟಳೆ. ಚೋದ್ಯಕ್ಕೊಳಗಾಗದೆ "ಅಸ್ತು'' ಅನ್ನಲೇಬೇಕಿದೆ.

ಇದುವರೆಗೆ ಕ್ರೋಧೀ ನಾಮ ಸಂವತ್ಸರದ ಉಸ್ತುವಾರಿಯಲ್ಲಿದ್ದ ನಾವುಗಳು ಈಗ ನೂತನ "ವಿಶ್ವವಸು'' ನಾಮ ಸಂವತ್ಸರದಲ್ಲಿ ಪದಾರ್ಪಣ ಮಾಡುತ್ತಿದ್ದೇವೆ.

ಹೊಸ ಸಂವತ್ಸರದ "ಒಳ-ಹೊರಗು'' ಏನಿದೆಯೋ ನಮಗೇನೂ ಗೊತ್ತಿಲ್ಲ. ಎಲ್ಲವೂ ಚಿದಂಬರ ರಹಸ್ಯ. ಎಲ್ಲವೂ ಗೂಡ, ನಿಗೂಢ. ಈ ಯುಗಾದಿ ಮತ್ತು ಈ ಯುಗದ ಹಾದಿ ಚೆನ್ನಾಗಿರಲಿ ಎಂದು ನಾವೆಲ್ಲ ಆಶಿಸಿಕೊಂಡಿರೋಣ.

ಯುಗದ ಆದಿಗೆ ಹಾದಿ ಇದು. ಯುಗದ ಹಾದಿಗೆ ಆದಿ ಇದು.

ಅವರಿವರೆನ್ನದೆ ನಾವೆಲ್ಲರೂ ನಮ್ಮ ಜೀವಮಾನದ ಒಂದು ಹೊಸ ಪರ್ವದಲ್ಲಿ ಮತ್ತು ಒಂದು ಹೊಸ ಸಂವತ್ಸರದಲ್ಲಿ ಹೆಜ್ಜೆ ಇಡುತ್ತಿದ್ದೇವೆ. ಅರವತ್ತು ವರುಷಗಳವರೆಗೆ ಬದುಕಿರುವ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಅರವತ್ತು ಸಂವತ್ಸರಗಳ ಉಸ್ತುವಾರಿಯನ್ನು ಅನುಭವಿಸಿಕೊಂಡು ಬಂದಿರುತ್ತಾನೆ.

ಯುಗಾದಿ ಎಂದರೆ ಹೊಸ ಹುಟ್ಟು. ಯುಗಾದಿ ಎಂದರೆ ಹೊಸ ಚಿಗುರು.

ಯುಗಾದಿ ಎಂದರೆ ಹೊಸ ಸಂಭ್ರಮ. ಯುಗಾದಿಯ ಪರ್ವಕಾಲಲ್ಲಿ ಹಳತು ಉದುರಿಹೋಗುತ್ತದೆ. ಹೊಸತು ಚಿಗಿತುಕೊಳ್ಳುತ್ತದೆ. ಯುಗಾದಿ ಕಾಲಘಟ್ಟದಲ್ಲಿ ಹಣ್ಣೆಲೆ ಉದುರುತ್ತದೆ. ಹಸಿರೆಲೆ ಉದ್ಭವಿಸುತ್ತದೆ.

ಬಹಳ ಜನಗಳು ಯುಗಾದಿಯನ್ನು ಹೊಸ ವರುಷಕ್ಕೆ (ನ್ಯೂ ಇಯರ್) ಹೋಲಿಸುತ್ತಾರೆ.

## ಹೊಸ ವರುಷಕ್ಕೂ ಯುಗಾದಿಗೂ ಎತ್ತಣ ಸಂಬಂಧವಯ್ಯ?

ಹೊಸ ವರುಷಾಚರಣೆಗೂ ಹಾಗೂ ಯುಗಾದಿ ಸಂಭ್ರಮಕ್ಕೂ ಸಮನುಂಟೆ?
"ಸಕ್ಕರೆಗುಪ್ಪಂ ಸರಿಮಾಳ್ಪರೇ, ನಕ್ಷತ್ರವೆಷ್ಟಾದೊಡಂ ದೊರೆಯೇ ಚಂದ್ರಗೆ?''
ಹೊಸ ವರುಷಾಚರಣೆ, ಅದೊಂದು ಹುಚ್ಚು. ಯುಗಾದಿ ಒಂದು ಹಬ್ಬ.

ಹೊಸ ವರುಷಾಚರಣೆ ಸಂಸ್ಕೃತಿಯ ಅಧಃಪತನದ ರೂವಾರಿ. ಯುಗಾದಿ ಸಂಸ್ಕೃತಿ, ಸುಸಂಸ್ಕೃತಿಯ ಹೆದ್ದಾರಿ. ಹೊಸ ವರುಷಾಚರಣೆಯಲ್ಲಿ ಮಾರಕದ ತಾಂಡವ. ಯುಗಾದಿಯಲ್ಲಿ ತಾರಕದ ''ಥಕ ಥೈ'', ''ಥೈ ಥಕ''...!!!

ಹೊಸ ವರುಷಕ್ಕೂ ಯುಗಾದಿಗೂ ಅಜಗಜಾಂತರ. ನಮಗೆ ಯುಗಾದಿ ಬರೀ ಹೊಸ ಸಂವತ್ಸರದ ಆದಿಯಲ್ಲ; ಅದು ನಮಗೊಂದು ಯುಗ. ಯುಗವೊಂದು ಕಟ್ಟಿಕೊಡುವ ಅನುಭವ ಮತ್ತು ಸಂಭ್ರಮವನ್ನು ಒಂದು ಸಂವತ್ಸರವು ಕಟ್ಟಿಕೊಡುವ ಕಾರಣದಿಂದಾಗಿ ಹೊಸ ಸಂವತ್ಸರದ ಆರಂಭದ ದಿನಕ್ಕೆ ''ಯುಗಾದಿ ಎಂದು ಕರೆಯುವುದು!!

## ಯುಗಾದಿಯಂದು ಬೇವು, ಬೆಲ್ಲವನ್ನು ಸೇವಿಸುತ್ತೇವೆ.

ನಮ್ಮ ಹಿರಿಯರು ಯುಗಾದಿ ಹಬ್ಬದ ಮೆನುನಲ್ಲಿ (ಭೋಜನ ಪಟ್ಟಿಯಲ್ಲಿ) ಬೇವು, ಬೆಲ್ಲದ ಸೇವನೆಗೆ ಮೊದಲ ಆದ್ಯತೆಯನ್ನು ಕೊಟ್ಟಿದ್ದಾರೆ. ಅವರ ಅರ್ಥಪೂರ್ಣ ಯೋಚನೆ, ಯೋಜನೆಗೆ ತಲೆಬಾಗಲೇಬೇಕು.

ವಿಸ್ಕಿ, ಬೀರು, ಬ್ರ್ಯಾಂಡಿ, ಸೆರೆ ಕುಡಿದು ಕುಣಿದು ಕುಪ್ಪಳಿಸಿ ಮೋಜು, ಮಜಾ, ಮಸ್ತಿ ಎನ್ನುತ್ತ ಹೊಸ ವರುಷವನ್ನು ಸ್ವಾಗತಿಸುವ ಅಧಮ ಸಂಸ್ಕೃತಿ ಎಲ್ಲಿ? ''ಬೇವು, ಬೆಲ್ಲವನ್ನು ತಿನ್ನುವ ಮೂಲಕ ಹೊಸ ವರುಷಕ್ಕೆ ಮೊದಲುಮಾಡಿ'' ಎಂದು ಹೇಳುತ್ತ ನಮ್ಮಗಳ ಬದುಕಿಗೆ ಆಧ್ಯಾತ್ಮಿಕ ಮತ್ತು ವೈಚಾರಿಕ ಬೆಸುಗೆಮಾಡುವ ಈ ತುಂಗ-ಉತ್ತುಂಗ ಸಂಸ್ಕೃತಿ ಎಲ್ಲಿ? ಒಂದು ಲಯ, ಇನ್ನೊಂದು ಹಿಮಾಲು. ಇಂಥ ಉದಾತ್ತ ಸಂಸ್ಕೃತಿಗೆ ತಲೆಬಾಗಲೇಬೇಕು.

ಈ ಬೇವು, ಬೆಲ್ಲದ ಹಿಂದೆ ಜೀವನ ತತ್ತ್ವಜ್ಞಾನವಿದೆ ಮತ್ತು ತಳಮಟ್ಟದ ಮರ್ಮಸ್ಪರ್ಶಿ ಬದುಕಿನ ಆದ್ಯಂತದ ಚಿಂತನೆ ಇದೆ.

ಬೇವು ಕಹಿಯ ಪ್ರತೀಕವಾದರೆ ಬೆಲ್ಲ ಸಿಹಿಯ ಪ್ರತೀಕ.

ನಮಗೆಲ್ಲ ಗೊತ್ತಿದೆ ಮತ್ತು ನಮ್ಮೆಲ್ಲರ ಅನುಭವಕ್ಕೆ ಬಂದಿದೆ.

ಜೀವನವೆಂದರೆ ಬರೀ ಸಿಹಿಯಲ್ಲ; ಜೀವನವೆಂದರೆ ಬರೀ ಕಹಿಯಲ್ಲ.

ಜೀವನವಿದು ಸಿಹಿ, ಕಹಿಗಳ ಸಂಗಮ.

ಸಿಹಿ, ಕಹಿ ಮತ್ತು ಕಹಿ, ಸಿಹಿ - ಇವು ಬದುಕೆಂಬ ನಾಣ್ಯದ ಎರಡು ಮಗ್ಗಲುಗಳು.

ಬರೀ ಬೇವು ಬೆಲ್ಲವನ್ನು ತಿನ್ನುವುದು ಯುಗಾದಿ ಹಬ್ಬದ ವಿಶೇಷವಲ್ಲ.

ಜೀವನದಲ್ಲಿ ಬೇವು ಬೆಲ್ಲವನ್ನು ಸಮಾನವಾಗಿ ಅನುಭವಿಸುವಂತೆ ಪಾಠಮಾಡುವುದು ಯುಗಾದಿ ಹಬ್ಬದ ವಿಶೇಷ.

ಯುಗಾದಿಯು ವರುಷದ ತುಂಬೆಲ್ಲ ಬೇವು, ಬೆಲ್ಲ, ಹಿತಾಹಿತ ಮತ್ತು ಸುಖ, ದುಃಖವನ್ನು ಅನುಭವಿಸುವುದಕ್ಕೆ ಒಂದು ವೇದಿಕೆಯನ್ನು ಸಿದ್ಧಪಡಿಸಿಕೊಡುತ್ತದೆ. ನಾವು ಸ್ಥಿತಪ್ರಜ್ಞರಾಗುವ ಅವಶ್ಯಕತೆ ಇಲ್ಲ. ನಾವು ಸುಖ, ದಃಖಗಳಲ್ಲಿ ಸ್ಥಿರಪ್ರಜ್ಞರಾಗಬೇಕು ಮತ್ತು ಸಮಪ್ರಜ್ಞರಾಗಬೇಕು.

ಯುಗಾದಿ ನಮಗೆ ಸ್ಥಿರಪ್ರಜ್ಞ ಮತ್ತು ಸಮಪ್ರಜ್ಞೆಯ ಪಾಠಮಾಡುತ್ತದೆ.

## ಯುಗಾದಿ ಹಬ್ಬದ ಪಥ್ಯವಿದು.

ಯುಗಾದಿ ಹಬ್ಬದಂದು ಏನು ಮಾಡಬೇಕು? ಯುಗಾದಿ ಹಬ್ಬದ ದಿನಚರಿ ಇದು.

1. ಮಾತೃ, ಭಗಿನಿಯರು ಮನೆ, ಮನೆಯಂಗಳವನ್ನು ಓರಣವಾಗಿ ಗೂಡಿಸಿ ಗೋಮಯದಿಂದ ಮನೆಯಂಗಳವನ್ನು ಒಪ್ಪವಾಗಿಸಿಬಿಟ್ಟು ಮನೆಯ ಮುಂದೆ ರಂಗವಲ್ಲಿಯನ್ನು ಇಡುವುದು 2. ಮನೆಬಾಗಿಲಿಗೆ ಮಾವು, ಬೇವುಗಳ ಹಸಿರುತೋರಣ ಮತ್ತು ತಳಿರು-ತೋರಣಗಳನ್ನು ಕಟ್ಟುವುದು 3. ಬೆಳಿಗ್ಗೆ ಬೆಳಿಗ್ಗೆ ಸತ್ತೈಲಮರ್ದನದೊಂದಿಗೆ ಅಭ್ಯಂಜನಸ್ನಾನ

ಮಾಡುವುದು 4. ನೂತನ ವಸ್ತ್ರಗಳನ್ನು ಮತ್ತು ಆಭರಣಗಳನ್ನು ಧರಿಸುವುದು 5. ಸೂರ್ಯನಮಸ್ಕಾರಮಾಡುವುದು 6. ಪರಿವಾರದ ಸದಸ್ಯರೆಲ್ಲ ಸೇರಿ ದೇವರಪೂಜೆ ಮಾಡುವುದು 7. ಮನೆಯ ಮುಂದುಗಡೆ ಬೇವು, ಮಾವುಗಳ ಪಲ್ಲವಗಳೊಂದಿಗೆ ಕೂಡಿದ ನೂತನವಸ್ತ್ರಸಹಿತ ತಾಮ್ರಕಲಶಧ್ವಜಾರೋಹಣ ಮಾಡುವುದು. ಧ್ವಜವಿದು ಅದೃಷ್ಟದಾಯಕ. ಧ್ವಜವು ಹಾದಿಯಲ್ಲಿ ಹೋಗುವ ಅದೃಷ್ಟವನ್ನು ಸ್ವಾಗತಿಸಿ ಮನೆಗೆ ಕರೆತರುತ್ತದೆ ಎಂದು ಬಲ್ಲವರು ಹೇಳುತ್ತಾರೆ. (ಮಹಾರಾಷ್ಟ್ರದಲ್ಲಿ ಈ ಧ್ವಜಕ್ಕೆ ''ಗುಡಿ'' ಎಂದು ಕರೆಯುತ್ತಾರೆ. ನಮ್ಮ ಪಕ್ಕದ ಮಹಾರಾಷ್ಟ್ರದಲ್ಲಿ ಯುಗಾದಿ ಹಬ್ಬವನ್ನು ''ಗುಡಿ ಪಾಡ್ವಾ'' ಎಂದೇ ಕರೆಯುತ್ತಾರೆ.)

8. ಬೇವು, ಬೆಲ್ಲದ ಪಚಡಿಯನ್ನು ಸೇವಿಸುವುದು

9. ಮನೆಯ ಸದಸ್ಯರೆಲ್ಲ ಸೇರಿ ಹೋಳಿಗೆ, ಒಬ್ಬಟ್ಟಿನೊಂದಿಗೆ ಮೃಷ್ಟಾನ್ನವನ್ನು ಸೇವಿಸುವುದು

10. ಬಂಧು, ಮಿತ್ರ, ಹಿತೈಷಿಗಳ ಜೊತೆಯಲ್ಲಿ ಬೇವು ಬೆಲ್ಲದ ಆದಾನ-ಪ್ರದಾನ.

11. ಸಂಜೆ ಸಮಯದಲ್ಲಿ ಮಠ, ಮಂದಿರಗಳಿಗೆ ಹೋಗಿ ದೇವರು ಮತ್ತು ಗುರುಗಳ ದರ್ಶನಮಾಡಿಬಿಟ್ಟು ಅವರಿಂದ ಆಶೀರ್ವಾದವನ್ನು ಪಡೆದುಕೊಳ್ಳುವುದು.

12. ಮಠ, ಮಂದಿರಗಳಲ್ಲಿ ನಡೆವ ಪಂಚಾಂಗಪೂಜೆಗೆ ಕಣ್ಣಾಗುವುದು ಮತ್ತು ಪಂಚಾಂಗಶ್ರವಣಕ್ಕೆ ಕಿವಿಯಾಗುವುದು

13. ಆಗಮಿಸಿದ ಸಂವತ್ಸರದಲ್ಲಿ ಕೈಕೊಳ್ಳಬೇಕಾದ ಯೋಚನೆ, ಯೋಜನೆಗಳ ವಾರ್ಷಿಕ ಕ್ಯಾಲೆಂಡರ್ ಅಥವಾ ಮುನ್ನೋಟ ದಿನಚರಿಯನ್ನು ಸಿದ್ಧಪಡಿಸುವುದು....

14. ಹೊಸ ಹೊಸ ಯೋಚನೆ, ಯೋಜನೆಗಳ ಕಾರ್ಯಾಚರಣೆಗೆ ಸಂಕಲ್ಪದೀಕ್ಷೆ ತೆಗೆದುಕೊಳ್ಳುವುದು............ಇತ್ಯಾದಿ.

ಯುಗಾದಿ ಹಬ್ಬ ಬರೀ ಭಾರತಕ್ಕೆ ಮಾತ್ರ ಸೀಮಿತವಲ್ಲ.

ವಿದೇಶಗಳಲ್ಲೂ ಯುಗಾದಿ ಹಬ್ಬದ ಹವಾ ಇದೆ. ಇಂಡೋನೇಷ್ಯಾದ ಬಾಲಿಯ ಹಿಂದೂಗಳು ಹೊಸವರ್ಷವನ್ನು ''ನೈಪಿ'' ದಿನವೆಂದು ಆಚರಿಸುತ್ತಾರೆ. ಮಾರಿಷಸ್‌ನಲ್ಲಿ ಯುಗಾದಿ ಹಬ್ಬದಂದು ರಾಷ್ಟ್ರೀಯ ಸಾರ್ವಜನಿಕ ರಜಾದಿನವೆಂದು ಘೋಷಿಸಲಾಗಿದೆ.

ಭಾರತೀಯ ಹಬ್ಬ ಹರಿದಿನಗಳಲ್ಲಿ ಚೈತ್ರ ಶುದ್ಧ ಪಾಡ್ಯಮಿ ಯುಗಾದಿ, ಇದು ಬರೀ ಒಂದು ಆಯಾರಾಂ ಗಯಾರಾಂ ಹಬ್ಬವಲ್ಲ. ಹಬ್ಬಗಳಲ್ಲಿಯೇ ಇದೊಂದು ''ಸೆಲೆಬ್ರಿಟಿ''. ನಮ್ಮ ದೇಶದಲ್ಲಿ ಬಹುತೇಕ ಮತ್ತು ಬಹುತರವಾಗಿ ಪ್ರತಿಯೊಂದು ಹಬ್ಬವೂ ಒಂದೊಂದು ಸೆಲೆಬ್ರಿಟಿಯೇ!! ನಾವು ಬಹುತೇಕ ಹಬ್ಬಗಳನ್ನು ವಿಜೃಂಭಣೆಯಿಂದ ಸಂಭ್ರಮ ಸಡಗರದಿಂದ ಆಚರಿಸುತ್ತೇವೆ. ಅದೇನೋ ಸರಿ, ಆದರೆ ನಾವು ಆ ಹಬ್ಬದ ಹಿಂದಿರುವ ಆಧ್ಯಾತ್ಮಿಕ ಹಿನ್ನೆಲೆ ಮತ್ತು ಅರ್ಥವನ್ನು ಹುಡುಕಿಕೊಂಡು ಹೋಗುವುದಿಲ್ಲ. ಇದು ಕಾರಣ, ನಮ್ಮಲ್ಲಿ ಬಹುತೇಕ ಹಬ್ಬಗಳಿಗೆ ಔಪಚಾರಿಕ ಮತ್ತು ಸಂಪ್ರದಾಯದ ಸ್ತರದಿಂದ ಮೇಲೆದ್ದು ಬರುವುದಕ್ಕೆ ಆಗುತ್ತಿಲ್ಲ.

ನಾವು ಬಹುತೇಕರು ಹಬ್ಬದ ಲೌಕಿಕ ಹಾಗೂ ಭೌತಿಕ ಅರ್ಥದಲ್ಲಿಯೇ ಕಳೆದುಹೋಗುತ್ತೇವೆ ಮತ್ತು ನಾವು ಅದರಲ್ಲಿಯೇ ಲೀನ, ತಲ್ಲೀನರಾಗಿಬಿಡುತ್ತೇವೆ.

ಕೊನೆಯಲ್ಲಿ ಡಿ. ವಿ. ಜಿ.ಯವರ ಮಂಕುತಿಮ್ಮನ ಕಗ್ಗದ ಈ ಎರಡು ಪದ್ಯಗಳನ್ನು ಸ್ಮರಿಸಿಕೊಂಡು

ಹೊಸತನವೆ ಬಾಳು ಹಳಸಿಕೆಯೆಲ್ಲ ಸಾವು ಬಿಡು ।
ರಸವು ನವನವತೆಯಿಂದನುದಿನವು ಹೊಮ್ಮಿ ॥
ಹಸನೊಂದು ನುಡಿಯಲ್ಲಿ ನಡೆಯಲ್ಲಿ ನೋಟದಲಿ ।

ಪಸರುತಿರೆ ಬಾಳ್ ಚೆಲುವು – ಮಂಕುತಿಮ್ಮ ॥

ಹೊಸ ಹೊಸಬನಾಗುವನನುಕ್ಷಣಂ ಮಾನವನು ।
ವಸುಧೆಯಾ ಮೂಸೆಯಲಿ ಪುಟಪಾಕವಾಂತು ॥
ರಸಮೂರ್ತಿಯಾಗುವನು ಜಗದಾತ್ಮಮತಿ ಬೆಳೆಯೆ ।
ಕಸವೆಲ್ಲ ಕಳೆದವನು – ಮಂಕುತಿಮ್ಮ ॥

**ಎಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳನ್ನು ತಿಳಿಸುತ್ತ ''ಲೋಕಾಃ ಸಮಸ್ತಾಃ ಸುಖಿನೋ ಭವಂತು'' ಎಂದು ಆಶಿಸುತ್ತೇವೆ.**

**ಡಾ. ಶ್ರೀ ಶಿವಾನಂದ ಶಿವಾಚಾರ್ಯರು**
**ಹಿರೇಮಠ, ತಪೋವನ, ತುಮಕೂರು**